ಅಜಿತನಿಗೆ ತಾನೂ ಗಿಣಿಯಾಗಿದ್ದರೆ ಅನ್ನಿಸಿತು. ಶಾಲೆ, ಓದು, ಹೋಮ್‌ವರ್ಕ್, ಪರೀಕ್ಷೆ ಹೀಗೆ ಯಾವುದೇ ಯೋಚನೆ ಇಲ್ಲದೆ ಆರಾಮವಾಗಿ ಮಾವಿನ ಹಣ್ಣು ತಿನ್ನಬಹುದಾಗಿತ್ತಲ್ಲ ಅಂದುಕೊಂಡ. ಸುತ್ತಮುತ್ತ ನೋಡಿದ. ಮಾವಿನ ತೋಪಿನ ಕಾವಲುಗಾರ ಎಲ್ಲೂ ಕಾಣಲಿಲ್ಲ. ಒಂದು ಮಾವಿನ ಹಣ್ಣು ಕಿತ್ತುಕೊಳ್ಳೋಣ ಎಂದು ಯೋಚಿಸಿದ. ಆದರೆ, ಎಲ್ಲ ಎತ್ತರದಲ್ಲಿದ್ದವು. ಸರಿ ಕಲ್ಲುಬೀರಿ ಕೆಡವೋಣ ಎಂದು ಎರಡು ಮೂರು ಬಾರಿ ಕಲ್ಲು ಬೀರಿದ. ಗಿಣಿಗಳು ಬೆಚ್ಚಿ ಹಾರಿಹೋದವು. ಮಾವಿನ ಹಣ್ಣು ಬೀಳಲಿಲ್ಲ. ಛೇ, ಎಂದುಕೊಂಡ. ನನ್ನ ಕೈ ಉದ್ದ ಆಗಿದ್ದಿದ್ದರೆ ಎಂದು ಬಲಗೈ ಚಾಚಿದ. ಆ ಕ್ಷಣದಲ್ಲಿ ಕೈ ಉದ್ದವಾಯಿತು. ಬೆಳೆದು ಬೆಳೆದು ಮಾವಿನ ಹಣ್ಣು ಕೈಗೆ ಎಟುಕಿತು. ಒಂದು ಹಣ್ಣು ಕಿತ್ತ. ಕೈಯನ್ನು ಹಿಂದಕ್ಕೆ ಎಳೆದುಕೊಂಡ. ಮತ್ತೆ ಎಡಗೈನಷ್ಟೇ ಉದ್ದ ಬಲಗೈ ಆಯಿತು. ಹಣ್ಣನ್ನು ಚೀಲದಲ್ಲಿ ಇಟ್ಟುಕೊಂಡು ಬೇಗ ಬೇಗ ಹೆಜ್ಜೆಹಾಕಿದ.

ಮನೆಯಲ್ಲಿ, "ಎಲ್ಲಿತ್ತೋ ಮಾವಿನಹಣ್ಣು?" ಎಂದು ವಿಚಾರಿಸಿದಾಗ "ತೋಪಿನಲ್ಲಿ" ಎಂದುಬಿಟ್ಟ. ಸುಳ್ಳು ಹೇಳಿದ ಹಾಗಾಗಲಿಲ್ಲ ಎಂದು ಸಮಾಧಾನ. ಆದರೆ, ಅವನಿಗೂ ಅದು ಅರ್ಥವಾಗಿರಲಿಲ್ಲ. ಮಾವಿನಹಣ್ಣು ಅಷ್ಟು ಎತ್ತರದಲ್ಲಿತ್ತು. ತಾನೋ ನೆಲದಮೇಲೆ ಕುಳ್ಳಗೆ ನಿಂತಿದ್ದ. ಅಷ್ಟು ವೇಗವಾಗಿ ಕೈ ಚಾಚಿ ಮತ್ತೆ ಹಿಂದಕ್ಕೆ ಬಂದಿತ್ತು. ಅದು ಅವನಿಗೇ ಗೊತ್ತಾಗಿರಲಿಲ್ಲ. ಕೈ ಚಾಚಿದ ಪ್ರಯತ್ನವೊಂದೇ ಅವನಿಗೆ ನೆನಪಿದ್ದದ್ದು.

ಮರುದಿನ ಶಾಲೆಯಲ್ಲಿ ಅಜಿತ ತನ್ನ ತರಗತಿಯಲ್ಲಿ ಮೊದಲನೆಯ ಸಾಲಿನಲ್ಲಿ ಕುಳಿತಿದ್ದ. ಆದರೆ, ಪಕ್ಕದ ಹುಡುಗನ ಜೊತೆಯಲ್ಲಿ ಮಾತನಾಡಿದ ಎಂದು ಶಿಕ್ಷಕರು ಅವನನ್ನು ಕೊನೆಯ ಬೆಂಚಿನಲ್ಲಿ ಕೂಡಿಸಿದ್ದರು. ಶಿಕ್ಷಕರು ಕಪ್ಪುಹಲಗೆಯ ಮೇಲೆ ಲೆಕ್ಕ ಬಿಡಿಸುತ್ತಿದ್ದಾಗ, ಅಜಿತನಿಗೆ ಮುಂದಿನ ಸಾಲಿನ ಹುಡುಗ ರಮೇಶನ ಕಿವಿಯನ್ನು ಹಿಡಿದುಕೊಳ್ಳಬೇಕೆಂದು ತೀವ್ರವಾದ ಆಸೆಯಾಯಿತು. ಚಕ್ಕನೆ ಬಲಗೈ ಚಾಚಿ ರಮೇಶನ ಕಿವಿ ಹಿಂಡಿ ಹಿಂದಕ್ಕೆಳೆದುಕೊಂಡ. ರಮೇಶ ಕೂಗಿದ,

"ಸಾರ್... ಯಾರೋ ನನ್ನ ಕಿವಿ ಹಿಂಡಿದರು."

ಹಿಂದಿನ ಸಾಲಿನವರು, "ನಾವಲ್ಲ ಸಾರ್" ಎಂದು ಕಿರಿಚಿದರು.

ಆದರೆ, ಹಿಂದಿನಿಂದ ಒಂದು ಕೈ ಬಂದು ಅವನ ಕಿವಿಯನ್ನು ಹಿಡಿಯಿತು ಎಂದು ಹೇಳಿದರು. ಅವರ ಹಿಂದಿನ ಸಾಲಿನ ಹುಡುಗರು, "ನಾವಲ್ಲ ಸಾರ್" ಎಂದು ಕೂಗಿದರು.

ಶಿಕ್ಷಕರು ರಮೇಶನನ್ನೇ ಬೈದರು, "ಸುಳ್ಳು ಹೇಳ್ತೀಯಾ?"

"ಗಾಡ್ ಪ್ರಾಮಿಸ್ ಸಾರ್. ನೀವೇ ನೋಡಿ ನನ್ನ ಕಿವಿ ಇನ್ನೂ ಉರೀತಿದೆ. ಕೆಂಪಾಗಿರಬೇಕು" ಎಂದ ರಮೇಶ.

ಶಿಕ್ಷಕರು ಅವನ ಕಿವಿಯನ್ನು ಪರೀಕ್ಷಿಸಿದರು. ಕೆಂಪಾಗಿತ್ತು.

ಅವರಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಎರಡನೇ ಬೆಂಚಿನ ಎಲ್ಲರನ್ನೂ ಮೇಲೆ ನಿಲ್ಲಿಸಿದರು. ಅಜಿತ ಒಳಗೇ ನಗುತ್ತಿದ್ದ. ಕಿವಿ ಹಿಂಡಬೇಕು ಎಂದು ಅಂದುಕೊಂಡಿದ್ದನಷ್ಟೇ – ಅಷ್ಟರಲ್ಲೇ ಅದು ಮುಗಿದುಹೋಗಿತ್ತು. ಬೆಳಕಿನ ವೇಗದಲ್ಲಿ ಕೈ ಉದ್ದವಾಗಿ ತನ್ನ ಕೆಲಸವನ್ನು ಮಾಡಿ ಹಿಂದೆ ಬಂದಿತ್ತು.

ಆವತ್ತು ಕೊನೆ ಪೀರಿಯಡ್ ಆಟವಿತ್ತು. ಪಿ.ಟಿ. ಮಾಸ್ತರು ಕಬಡ್ಡಿ ಆಟವನ್ನು ಅಭ್ಯಾಸ ಮಾಡಿಸುತ್ತಿದ್ದರು. ಮುಂದಿನ ತಿಂಗಳು ಇನ್ನೊಂದು ಶಾಲೆಯ ಮೇಲೆ ಸ್ಪರ್ಧೆ ಇತ್ತು. ಅದಕ್ಕೆ ಎಲ್ಲರಿಗೂ ತರಬೇತಿ ಕೊಟ್ಟು ಉತ್ತಮವಾಗಿ ಆಡುವವರನ್ನು ಆರಿಸಿ ತಂಡವನ್ನು ಕಟ್ಟಬೇಕಿತ್ತು. 'ಎ', 'ಬಿ' ಎಂದು ಎರಡು ತಂಡಗಳನ್ನು ಮಾಡಿ, ಆಟದ ನಿಯಮಗಳನ್ನು ಹೇಳಿಕೊಟ್ಟು ಮಾರ್ಗದರ್ಶನ ನೀಡುತ್ತಿದ್ದರು. ಅಜಿತ್ 'ಎ' ತಂಡದಲ್ಲಿದ್ದ. ಆಟ ಪ್ರಾರಂಭವಾಯಿತು. ಮೂರನೆಯ ಪ್ರವೇಶವಾಗಿ ಅಜಿತ್ 'ಬಿ' ತಂಡದ ಆವರಣದೊಳಗೆ ನುಗ್ಗಿದ. ಬಿಳಿಪಟ್ಟೆಯನ್ನು ದಾಟಿ ಕೈ ಚಾಚುತ್ತಿದ್ದಂತೆ